ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ. ನಂಜನಗೂಡು ತಾ.

ಮೌಲ್ಯಾಂಕನ-ಮಾರ್ಚ್-2023

ಮಾದರಿ ಪ್ರಶ್ನೆ ಪತ್ರಿಕೆ

ವಿಷಯ : ಕನ್ನಡ **ತರಗತಿ: 8** **ಅಂಕಗಳು;40** **ಸಮಯ: 2 ಗಂಟೆ**

ಸೂಚನೆ:

- **ಇದು ಕೇವಲ ಮಾದರಿ ಪ್ರಶ್ನೆ ಪತ್ರಿಕೆ (ಅಭ್ಯಾಸಕ್ಕಾಗಿ ಮಾತ್ರ ಬಳಸುವುದು)**
- **ಟೈಪ್ ಮಾಡುವಾಗ ಅಥವಾ ಪ್ರಶ್ನೆ ತಯಾರಿಸುವಾಗ ಸಣ್ಣ ಪುಟ್ಟ ತಪ್ಪುಗಳಿದ್ದಲ್ಲಿ ಸರಿಪಡಿಸಿಕೊಂಡು ಅಭ್ಯಾಸ ಮಾಡಿಸುವುದು.**
- **ಈ ಪ್ರಶ್ನೆ ಪತ್ರಿಕೆಯನ್ನು ಇಲಾಖೆ ನೀಡಿರುವ ಮಾದರಿ ಪ್ರಶ್ನೆ ಪತ್ರಿಕೆಯ ಆಧಾರದಲ್ಲಿ ರಚಿಸಲಾಗಿದೆ**

1 ರಿಂದ 20ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿದ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 20*1=20

1. ರಸ್ತೆಯಲ್ಲಿ ರೋಗಿ ಒಬ್ಬನು ತೆರಳುತ್ತಿದ್ದನು, ಅವನಿಗೆ ರಮೇಶನು ಸಹಾಯ ಮಾಡಿದನು. –ಈ ವಾಕ್ಯದಲ್ಲಿರುವ ಅನ್ವರ್ಥನಾಮ ಪದ.

   ಎ) ರಮೇಶ ಬಿ)ರೋಗಿ ಸಿ)ರಸ್ತೆ ಡಿ)ಸಹಾಯ

2. ಈ ಕೆಳಗಿನವುಗಳಲ್ಲಿ ಪುಲ್ಲಿಂಗ ಪದವನ್ನು ಗುರುತಿಸಿ.

   ಎ)ಮಾಲಾ ಬಿ)ಮಾನಸ ಸಿ)ನಾಯಿ ಡಿ)ಗಿರೀಶ

3. ತೊಟ್ಟಿಲಲ್ಲಿ ಮಗು ಮಲಗಿತ್ತು. – ಇಲ್ಲಿ ಮಗು ಪದದ ಬಹುವಚನ ರೂಪ.

   ಎ)ಮಗ ಬಿ)ಮಗಳು ಸಿ)ಮಕ್ಕಳು ಡಿ)ಮಗಗಳು

4. 10ನೇ ಶತಮಾನದ ವರೆಗೆ ಗಂಗರು ತಲೆಯೆತ್ತಿ ಬಾಳಿದರು. – ಇದು ವಾಕ್ಯದ ಈ ಪ್ರಕಾರಕ್ಕೆ ಸಂಬಂಧಿಸಿದೆ.

   ಎ)ಸಾಮಾನ್ಯ ವಾಕ್ಯ ಬಿ)ಸಂಯೋಜಿತ ವಾಕ್ಯ ಸಿ)ಮಿಶ್ರ ವಾಕ್ಯ ಡಿ)ಪ್ರಶ್ನಾರ್ಥಕ ವಾಕ್ಯ

5. <u>ಮುಮ್ಮಡಿ</u> ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಪ್ರಸಿದ್ಧ ಅರಸರಾಗಿದ್ದರು. – ಅಡಿಗೆರೆ ಎಳೆದ ಪದವು ಈ ಸಮಾಸಕ್ಕೆ ಉದಾಹರಣೆ

   <u>ಎ)</u>ತತ್ಪುರುಷ ಸಮಾಸ ಬಿ)ದ್ವಿಗು ಸಮಾಸ ಸಿ)ಅಂಶಿ ಸಮಾಸ ಡಿ)ಕ್ರಿಯಾ ಸಮಾಸ

6. ಮರದಲ್ಲಿ ಪಕ್ಷಿಗಳು ವಾಸ ಮಾಡುತ್ತವೆ.–ಈ ವಾಕ್ಯದಲ್ಲಿ ಮರದಲ್ಲಿ ಎಂಬುದು ಈ ವಿಭಕ್ತಿ ಪ್ರತ್ಯಯಕ್ಕೆ ಉದಾಹರಣೆಯಾಗಿದೆ. ಎ)ಪ್ರಥಮ ಬಿ)ತೃತೀಯ ಸಿ)ಸಪ್ತಮಿ ಡಿ)ಚತುರ್ಥಿ

7. ಈ <u>ವರ್ಷ</u> ಎಂಟನೇ ತರಗತಿಗೆ ಮೌಲ್ಯಾಂಕನ ಪರೀಕ್ಷೆ ಇರುತ್ತದೆ. – ಅಡಿಗೆರೆಳೆದ ಪದದ ತದ್ಭವ ರೂಪ ಇದು:–

   ಎ)ಬರುಷ ಬಿ)ವರುಷ ಸಿ)ಹರುಷ ಡಿ)ವರ್ಷ

8. "ಕೆಲರು ಗೋಧಿಯ ಸಾಮೆಯನು ಕೆಲ

ಕೆಲರು ನವಣೆಯ ಕಂಬು ಜೋಳವ

ಕೆಲರು ಹಾರಕವೆಂದು ಕೆಲರು ನೆಲ್ಲನತಿಶಯವ

ಕೆಲರು ನರೆದಲೆಗನನು ಪತಿಕರಿ

ಸಲದ ನೋಡಿದ ನೃಪತಿಯದರೊಳು

ಹಲವು ಮತವೇಕೊಂದನೇ ಪೇಳೆನಲು ಗೌತಮನು" ಈ ಪದ್ಯದ ಸಾಹಿತ್ಯ ಪ್ರಕಾರ ----------

ಎ)ತ್ರಿಪದಿ ಬಿ)ದ್ವಿಪದಿ ಸಿ)ಚೌಪದಿ ಡಿ)ಷಟ್ಪದಿ

9. ನಮ್ಮ ಊರಿಗೆ ಶಾಸಕರು ಬರ್ತಾರೆ. – ಈ ವಾಕ್ಯದಲ್ಲಿ ಬರ್ತಾರೆ ಪದದ ಗ್ರಾಂಥಿಕ ರೂಪ

ಎ)ಬರುತ್ತಾರೆ ಬಿ) ಬರುತ್ತಾನೆ ಬಿ)ಬಂದರು ಡಿ)ಬರುವರು

10. ರಾಮನು ಅಶ್ವಮೇಧ ಯಾಗ ಕೈಗೊಂಡನು. – ಇಲ್ಲಿ 'ಅಶ್ವ' ಪದದ ಅರ್ಥ

ಎ)ಎತ್ತು ಬಿ)ಜಿಂಕೆ ಸಿ)ಕುದುರೆ ಡಿ)ಹಸು

11. ಕಾರ್ಯಕ್ರಮದ ನಿರೂಪಣಾ ಹಂತಗಳಲ್ಲಿ ಇದು ಕೊನೆಯದು.

ಎ)ಪ್ರಾರ್ಥನೆ ಬಿ)ವಂದನಾರ್ಪಣೆ ಸಿ)ಉದ್ಘಾಟನೆ ಡಿ)ಸ್ವಾಗತ

12. ಕೆಳಗಿನ ಗದ್ಯಭಾಗ ಓದಿ ಅದರಲ್ಲಿ ಅಡಗಿರುವ ಮೌಲ್ಯವನ್ನು ಗುರುತಿಸಿ.

"ಗ್ರಾಮಗಳ ಜನರ ಬೆವರಿನಿಂದ ಪಡೆದ ತೆರಿಗೆ ಹಣದಲ್ಲಿ ಸರ್ಕಾರ ನಡೆಸುವ ನಾವು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳದಿದ್ದರೆ ಸರಳ ಕಾಯ್ದೆಯನ್ನು ತಿಳಿಯಲು ಬೇರೆಯವರನ್ನು ಅವಲಂಬಿಸಬೇಕಿಲ್ಲ" ಎಂದು ಆಲೋಚಿಸಿ ಆ ದಿನದಿಂದಲೇ ಸಾಧ್ಯವಾದಷ್ಟು ಮಟ್ಟಿಗೆ ಆಡಳಿತದಲ್ಲಿ ಕನ್ನಡವನ್ನು ತರಲು ತಮ್ಮ ಕೈಲಾದಷ್ಟು ಪ್ರಯತ್ನ ಮಾಡಿದರು. ಆ ಅಧಿಕಾರಿಯೇ ಜ್ಞಾನಪೀಠ ಪ್ರಶಸ್ತಿ ವಿಜೇತ, ಸಣ್ಣ ಕಥೆಗಳ ಪಿತಾಮಹ ಮಾಸ್ತಿ ವೆಂಕಟೇಶ ಅಯ್ಯಂಗಾರ್

ಎ)ಭಾಷಾಭಿಮಾನ ಬಿ)ದೇಶಭಿಮಾನ ಸಿ)ಜನಾಭಿಮಾನ ಡಿ)ಬಿಗುಮಾನ

13. ಈ ಕೆಳಗಿನ ನಾಟಕ ಭಾಗವನ್ನು ಓದಿ ಉತ್ತರವನ್ನು ಬರೆಯಿರಿ.

ದುರ್ವಿಧ: ಅಪ್ಪಣೆಯಾಗಬೇಕು ಅನ್ನದಾತ……..

ಕಂಸ: ನಮ್ಮ ಪಟ್ಟದ ಆನೆ ಹೇಗಿದೆ ಹೇಳು….. ಅದರ ಹೆಸರು ಏನು …?

ಹಾ….ಕುವಲಯಾಪೀಡ……! ಕುಲಯಾ ಪೀ…ಡ….!

ಇಲ್ಲಿ ಅಪ್ಪಣೆ ಪದದ ಅರ್ಥ ಇದಾಗಿದೆ

ಎ)ಅಸಮ್ಮತಿ ಬಿ)ಅನುಮತಿ ಸಿ)ಕಾಯುವಿಕೆ ಡಿ)ಹೊರಡುವುದು

14. "ಯಾರನ್ನಾದರೂ ಮೊದಲು ನಂಬಿಸಿ ಮತ್ತೆ **ಕೈಕೊಡುವುದು** ಸರಿಯಲ್ಲ". ಅಡಿಗೆರೆ ಎಳೆದ ನುಡಿಗಟ್ಟಿನ ಅರ್ಥ

ಎ)ಕೈಯನ್ನು ಕೊಡುವುದು ಬಿ)ತಪ್ಪು ಮಾಡುವುದು ಸಿ)ಮೋಸ ಮಾಡುವುದು

ಡಿ)ಕಾಪಾಡುವುದು

15. "ಹಿತವಂ ತೋರುವನಾತ್ಮಬಂಧು" – ಈ ಸಾಲಿನ ಹೊಸಗನ್ನಡ ರೂಪ

ಎ)ಹಿತವನ್ನು ಬಯಸುವವನು ಬಂಧು ಬಿ)ಹಿತವನ್ನು ಬಯಸುವವ ಗೆಳೆಯ

ಸಿ)ಹಿತವನ್ನು ಕಾಪಾಡುವವನು ತಂದೆ ಡಿ)ಹಿತ ತೋರುವವಳು ಸತಿ

16. ನಾ ಮುಂದೆ ನೀ ಮುಂದೆ ಎಂದು ತಲಕಾಡಿನ ಕಡೆಗೆ ಪ್ರವಾಸಿಗರನ್ನು ಹೊತ್ತುಕೊಂಡೊಯ್ಯುತ್ತಿದ್ದ ಎರಡು ಮೋಟಾರುಗಳು ಓಡುತ್ತಿರುವಾಗ ನನ್ನ ಕಣ್ಮುಂದೆ ತಲಕಾಡಿನ ನೆಲದ ಮೇಲೆ ವೈಭವದಿಂದ ರಾಜ್ಯವಾಳಿದವರ ಕಥೆ ಹಕ್ಕಿಯಂತೆ ಚಲಿಸಿ ಪಾತರಗಿತ್ತಿಯಂತೆ ಕುಣಿದು ಮೃಗ ಜಲದಂತೆ ಮಾಯವಾಯಿತು.

ಈ ಲೇಖನ ಭಾಗದ ಸಾಹಿತ್ಯ ಪ್ರಕಾರ

ಎ)ನಾಟಕ ಬಿ)ಜೀವನ ಚರಿತ್ರೆ ಸಿ)ಕಥನ ಕವನ ಡಿ)ಪ್ರವಾಸ ಕಥನ

17. ನನ್ನ ದೇಹದ ಬೂದಿ– ಗಾಳಿಯಲ್ಲಿ ತೂರಿ ಬಿಡಿ,

ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ;

ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದುಬರೆ,

ಧನ್ಯವಾಯಿತು ಹುಟ್ಟು ಸಾವಿನಲ್ಲಿ

ಈ ಪದ್ಯ ಭಾಗದ ಆಶಯ

ಎ)ಗೊಬ್ಬರದ ಮಹತ್ವ ಬಿ)ಜೀವನದ ಸಾರ್ಥಕತೆ ಸಿ) ಬೂದಿ – ಗಾಳಿ ಮಿಲನ ಡಿ)ಹುಟ್ಟು ಸಾವಿನ ಪಯಣ

18. ರಾಮನು ಕಾಡಿಗೆ ಹೋದಾಗ ಕ್ರೂರ ಮೃಗಗಳು ಅವನನ್ನು ಕಾಡಿದವು. – ಈ ವಾಕ್ಯದಲ್ಲಿ ನಾ ಕಾಡು ಪದದ ನಾನಾರ್ಥ ಪದಗಳು

ಎ)ವನ–ಪೀಡಿಸು ಬಿ)ವನ–ಊರು ಸಿ)ವನ–ಬನ ಡಿ)ಧನ–ಜನ

19. ಈ ಚಿತ್ರದ ಸೂಕ್ತವಾದ ಸಂದೇಶ–

(ಕಲಿಕಾ ಫಲ 11ರ ಪುಟ ಸಂಖ್ಯೆ 129 ಮೊದಲ ಚಿತ್ರ)

ಎ)ನೀರನ್ನು ಪೋಲು ಮಾಡಬಹುದು ಬಿ)ನೀರನ್ನು ಮರುಬಳಕೆ ಮಾಡಬಾರದು

ಸಿ)ನೀರನ್ನು ಪೋಲು ಮಾಡಬಾರದು ಡಿ)ನೀರನ್ನು ಬಳಸಬಾರದು

20. ಕೆಳಗೆ ನೋವುಗಳಲ್ಲಿ ಶುದ್ಧ ರೂಪದ ವಾಕ್ಯವನ್ನು ಗುರುತಿಸಿ

ಎ) ಮಳೆಯಲ್ಲಿ ಛತ್ರಿ ಹಿಡಿದು ನಡೆಯುತ್ತಾರೆ

ಬಿ) ಮಳೆಯಲ್ಲಿ ಛತ್ರಿ ಇಡಿದು ನಡೆಯುತ್ತಾರೆ.

ಸಿ) ಮಳೆಯಲ್ಲಿ ಚತ್ರಿ ಹಿಡಿದು ನಡೆಯುತ್ತಾರೆ

ಡಿ) ಮಳೆಯಲ್ಲಿ ಛ್ರತಿ ಹಿಡಿದು ನಡೆಯುತ್ತಾರೆ

21ರಿಂದ 28ರ ವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.

21. ಕಾಯಕದಲ್ಲಿ ನಿರತನಾಡೆ 2*1=2

ಗುರು ದರ್ಶನವಾದಡೂ ಮರೆಯಬೇಕು,

ಲಿಂಗ ಪೂಜೆಯಾದಡೂ ಮರೆಯಬೇಕು

ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು

ಈ ವಚನದಲ್ಲಿ ಕಾಯಕದ ಮಹತ್ವವನ್ನು ಹೇಗೆ ಅರ್ಥೈಸಲಾಗಿದೆ?

22. ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ। 2*1=2

ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೆ ಧಾರ್ಮಿಕಂ॥

ಈ ಮೇಲಿನ ಸಾಲುಗಳನ್ನಾಧರಿಸಿ ಅರಸ, ಮಂತ್ರಿ, ಧಾರ್ಮಿಕನ ಲಕ್ಷಣಗಳನ್ನು ಬರೆಯಿರಿ

23. "ದಕ್ಷಿಣದ ಕಾಶಿಯಂದೆ ಹೆಸರುವಾಸಿಯಾಗಿರುವ ನಂಜನಗೂಡಿನ ನಂಜುಂಡೇಶ್ವರನ ಜಾತ್ರೆಯು ಅದ್ದೂರಿಯಾಗಿ ನಡೆಯುತ್ತದೆ. ರಥೋತ್ಸವದಲ್ಲಿ ಸಾವಿರಾರು ಭಕ್ತಾದಿಗಳು ಭಾಗವಹಿಸುತ್ತಾರೆ". ಹೀಗೆ ನೀವು ನೋಡಿರುವ ಜಾತ್ರೆಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆಯಿರಿ. 2*1=2

24. "ದೇಶ ಸುತ್ತು ಕೋಶ ಓದು". –ಈ ಗಾದೆ ಮಾತನ್ನು ಅರ್ಥೈಸಿ ಬರೆ 2*1=2

25. ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯ ಕುರಿತು ಬರೆಯಿರಿ. 2*1=2

26. ಚಿತ್ರ ನೋಡಿ ಅನಿಸಿಕೆ ಬರೆಯಿರಿ.

(ಕಲಿಕಾ ಚೇತರಿಕೆ ಪುಸ್ತಕದ ಕಲಿಕಾ ಫಲ 8 ಪುಟ ಸಂಖ್ಯೆ 99) 3*1=3

27. ನಿಮ್ಮನ್ನು ನಂಜನಗೂಡಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೂಡ್ಲಾಪುರದ 'ದೀಪು' ಎಂದು ಭಾವಿಸಿಕೊಂಡು ನಿಮ್ಮ ಅಜ್ಜಿಯ ಮನೆಯಲ್ಲಿ ನಡೆಯುವ ಹಬ್ಬಕ್ಕೆ ತೆರಳಲು ಎರಡು ದಿನ ರಜೆ ಕೋರಿ ತರಗತಿ ಶಿಕ್ಷಕರಿಗೆ ಪತ್ರ ಬರೆಯಿರಿ 3*1=3

28. **ಕೆಳಗಿನ ಗದ್ಯಭಾಗ ಓದಿ ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.** 4*1=4

ಮಗ್ಗದ ಸಾಹೇಬ ಅಂದರೆ ಅಬ್ದುಲ್ ರಹೀಮ್ ಸಾಹೇಬ್. ಅವನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿದೆ. ಆದರೂ ಅವನನ್ನು ಮಗ್ಗದ ಸಾಹೇಬನೆಂದೇ ಕರೆಯುವುದು ವಾಡಿಕೆ. ಅವರ ಪೂರ್ವಜರು ಸಾಹೇಬ್ ಬಹದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ; ದೇವಸ್ಥಾನವನ್ನೂ ಕಟ್ಟಿಸಿದ್ದರು. ಇಂದಿಗೂ ಈ ದೇವಸ್ಥಾನದಲ್ಲಿ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿದೆ. ಇಂತಹ ಸಂಪ್ರದಾಯ ಪದ್ಧತಿಗಳು ಇಂದಿಗೂ ಕರ್ನಾಟಕದಲ್ಲಿ ನಡೆಯುತ್ತಿವೆ. ಇದರಿಂದ ಪೂರ್ವಜರಲ್ಲಿ ಎಂತಹ ಘನತೆ, ಸದಾಚಾರ, ಸದ್ಭಾವನೆಗಳು ಇದ್ದವು ಎಂದು ತಿಳಿಯುವುದು.

* ಮಗ್ಗದ ಹುಸೇನ್ ಸಾಹೇಬರು ಜನಪ್ರಿಯರಾಗಲು ಕಾರಣವೇನು?

* ಧರ್ಮಸಮನ್ವಯತೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

****